ಬಳಿ ಬಂದ ಅರಬಿ ಇವನನ್ನು ನೋಡಿ 'ಹಾಯ್' ಎನ್ನುವಂತೆ ಕೈಯೆತ್ತಿದ. ದೀಪಕ್ ಕೂಡ 'ಸಲಾಂ ಅರಬಾಬ್' ಎಂದ.

ಬಳಿಕ ಎಸ್ ಯೂ ವಿಯ ಹಿಂದಿನ ಬಾಗಿಲು ತೆರೆದು ಗಾದಾಳನ್ನು ಒಳಗೆ ಬಿಟ್ಟ. 'ನೀನೂ ಬಾ' ಎಂದು ಕರೆದು ಹಿಂದಿನ ಬಾಗಿಲಿನ ಕಡೆಗೆ ತೋರಿಸಿದ.

ಎಸ್ ಯೂ ವಿಯ ಹಿಂದುಗಡೆಯ ಸೀಟು ತೆಗೆದು ಮರದ ಸಣ್ಣ ರಿಂಗ್ ಸ್ಟಾಂಡ್ ಕೂರಿಸಲಾಗಿತ್ತು. ಗಿಡುಗ ರಿಂಗ್ ಸ್ಟಾಂಡ್ ಮೇಲೆ ವಿರಾಜಮಾನವಾಗಿತ್ತು. ಅಲ್ಲೇ ಒಂದು ಮರದ ಪೆಟ್ಟಿಗೆಯ ಮೇಲೆ ಸಣ್ಣ ಸೀಟು ಹಾಕಿಡಲಾಗಿತ್ತು. ಗಿಡುಗನ ಸೌಕರ್ಯದ ಸ್ಟಾಂಡ್ ಕೂರಿಸುವುದಕ್ಕಾಗಿ ದುಬಾರಿ ಎಸ್ ಯೂವಿಯ ಸೀಟು ಕಳಚಿ ಹಾಕಿದ ಅರಬಿ ತನ್ನನ್ನು ಜುಜುಬಿ ಡಬ್ಬದ ಮೇಲೆ ಕುಳಿತುಕೊಳ್ಳಲು ಸೂಚಿಸಿದಾಗ ಹಕ್ಕಿಗೆ ಕೊಡುವ ಮರ್ಯಾದೆ ಈತ ಮನುಷ್ಯರಿಗೆ ಕೊಡುವುದಿಲ್ಲವಲ್ಲ ಎಂದೆನಿಸಿ ದೀಪಕನಿಗೆ ಕಸಿವಿಸಿಯಾಯಿತು. ಆದರೂ ತೋರ್ಪಡಿಸದೆ ಹತ್ತಿ ಕುಳಿತ. 'ಬಾಗಿಲು ಹಾಕಿಕೋ' ಎಂದ ಅರಬಿ ತಾನು ಡ್ರೈವರ್ ಸೀಟು ಹತ್ತಿಕುಳಿತು ಸ್ಟಾರ್ಟ್ ಮಾಡಿ ಹೊರಟ.

ಮೊದಮೊದಲು ಪಟ್ಟಣದ ಮೂರ್ನಾಲ್ಕು ಲೇನಿನ ರಸ್ತೆಗಳು. ಆಮೇಲೆ ಹೊರವಲಯದ ಎರಡು ಲೇನಿನ ರಸ್ತೆಗಳು. ಮತ್ತೆ ಕಾಣುವಷ್ಟೂ ದೂರಕ್ಕೂ ಮರುಭೂಮಿಯ ಒಳಗಿನ ಒಂದೇ ಲೇನಿನ ರಸ್ತೆ. ಕೊನೆಗೆ ರಸ್ತೆಯೂ ಇಲ್ಲ, ಬರೇ ವಾಹನಗಳ ಓಡಾಟದಿಂದ ಗಟ್ಟಿಗೊಂಡ ಮಣ್ಣಿನ ದಾರಿ. ಬೀಸುವ ಬಿಸಿಗಾಳಿಗೆ ಪುಟಿದೇಳುವ ದೂಳು. ಹತ್ತಿ ಕುಳಿತ ಕೂಡಲೇ, 'ನಾವು ಈಗ ಗಾದಾಳಿಗೆ ತಾಲೀಮು ನೀಡಲು ಹೋಗುತ್ತಿದ್ದೇವೆ' ಎಂದು ಆರಂಭಿಸಿದ್ದ ಅರಬಿ ಸುಮಾರು ಎರಡು ಗಂಟೆಗಳ ಡ್ರೈವಿಂಗಿನ ದಾರಿಯುದ್ದಕ್ಕೂ ಗಿಡುಗಗಳ ಒಡನಾಟ ಮತ್ತು ಅದರೊಂದಿಗೆ ಹಾಸುಹೊಕ್ಕಾದ ತನ್ನ ಜೀವನವನ್ನು ವಿವರಿಸುತ್ತಿದ್ದ. ಸ್ಟಾಂಡಿನಲ್ಲಿ ವಿರಮಿಸಿದ್ದ ಗಾದಾ, ಹತ್ತಿರ ಕುಳಿತ ದೀಪಕನನ್ನೇ ದಿಟ್ಟಿಸಿ ನೋಡುತ್ತಿತ್ತು.

'ಅಪ್ಪನಿಂದ ಬಾಲ್ಯದಲ್ಲೇ ಗಿಡುಗಗಳ ಪರಿಚಯವಾಗಿ ಆಸಕ್ತಿ ಹುಟ್ಟಿತು. ಬೆಳೆದು ಯುವಕನಾಗುತ್ತಿದ್ದಂತೆ ನನಗೆ ಶಿಕ್ಷಣದ ವಿಷಯಗಳಲ್ಲಿ ಆಸಕ್ತಿ ಕಡಿಮೆಯಾಗಿ ಇದೇ ಬೆಳೆಯಿತು. ಸರಿಯಾಗಿ ಶಾಲೆಗೆ ಹೋಗಲಿಲ್ಲ. ಅಪ್ಪನಿಗೂ ತನ್ನ ಗಿಡುಗಗಳ ಒಡನಾಟಕ್ಕೆ ಮಗನ ಸಹಾಯ ಮುಖ್ಯವಾಗಿತ್ತು. ಗಿಡುಗಗಳ ಸಹಾಯದಿಂದ ಮರುಭೂಮಿಗೆ ಹೋಗಿ ಬೇಟೆಯಾಡುತ್ತಿದ್ದ ಅಪ್ಪ ಗಲ್ಫ್ ಪ್ರಾಂತ್ಯಗಳ ಉದ್ದಗಲಕ್ಕೂ ಗಿಡುಗಗಳೊಂದಿಗೆ ಸಂಚರಿಸಿ ಸ್ಪರ್ಧೆಗಳಲ್ಲಿಯೂ ಭಾಗವಹಿಸುತ್ತಿದ್ದ. ಹಲವಾರು ಬಹುಮಾನಗಳನ್ನು ಗೆದ್ದಿದ್ದ. ತಮ್ಮ ಸಂಸ್ಕೃತಿಯ ಭಾಗವೆಂದು ಈ ಭಾಗದ ಎಲ್ಲ ದೊರೆಗಳೂ ಫಾಲ್ಕನರಿಗೆ ಪ್ರೋತ್ಸಾಹ ನೀಡುತ್ತಿದ್ದುದರಿಂದ ನಮ್ಮ ಜೀವನ ಹಾಯಾಗಿ ನಡೆಯುತ್ತಿತ್ತು' ಅಂದ. 'ಇದುವರೆಗಿನ ಬದುಕೆಲ್ಲ ಇದರಲ್ಲೇ ಹೋಯಿತು. ಇವತ್ತು ಫಾಲ್ಕನರಿಯಲ್ಲಿ ಅರಬರಿಗೆ ಆಸಕ್ತಿ ಹಿಂದಿನಂತಿಲ್ಲ. ರಾಜರ ಪ್ರೋತ್ಸಾಹ ಮಾತ್ರ ಮುಂದುವರೆಯುತ್ತಿದೆ. ಅಲ್ಲಲ್ಲಿ ಫಾಲ್ಕನ್ ಕ್ರೀಡಾಕೂಟಗಳು ಆಯೋಜಿಸಲ್ಪಡುತ್ತವೆ. ರಾಜ ವಂಶಸ್ಥರು, ಶ್ರೀಮಂತರ ಮಕ್ಕಳು ಮೋಜಿಗಾಗಿ ಕೂಟಗಳಿಗೆ ಹಾಜರಾಗುತ್ತಾರೆ. ಶ್ರೀಮಂತ ಯುವಕರಿಗೆ ಪ್ರಶಸ್ತಿ ಗೆದ್ದುಕೊಡುವ ಆಸೆ ತೋರಿಸಿ ಹೊರದೇಶಗಳಿಂದ ತರಬೇತುದಾರರು ಬರುತ್ತಿದ್ದಾರೆ. ವಿಶೇಷ ತಳಿಗಳ ಹಕ್ಕಿಗಳೂ ಇಲ್ಲಿ ಎಂಟ್ರಿ ಕೊಟ್ಟಿವೆ. ನನ್ನ ಹಾಗೆ ಲೋಕಲ್ ತಳಿಯ ಹಕ್ಕಿಗಳೊಂದಿಗೆ ಬೆರೆತು ತಾವೇ ತಾಲೀಮು ಮಾಡಿಸಿ ಸ್ಪರ್ಧೆಗೆ ಇಳಿಯುವವರು ಕಡಿಮೆ. ನನ್ನದು ಅಪ್ಪಟ ಅರಬ್ ಸಂಸ್ಕೃತಿಯ ಫಾಲ್ಕನರಿ. ಈಗ ಟ್ರೆಡಿಶನಲ್ ತಾಲೀಮಿನ